ತಿರುಗಾಟದಲ್ಲಿ 'ಬೂದಿ'ಯನ್ನು ಮರಳಿ ತರುತ್ತೇವೆ ಎಂದು ಆಂಗ್ಲ ಕ್ರಿಕೆಟ್ ಪ್ರೇಮಿಗಳಿಗೆ ಭರವಸೆ ನೀಡಿದ್ದ. 1882ರ ಮೊದಲ ಸೋಲಿನ ನಂತರದ ಎಂಟು ಆಶಸ್ ಸರಣಿಗಳಲ್ಲಿ ಇಂಗ್ಲೆಂಡ್ ನಿರಂತರ ಜಯ ಗಳಿಸಿತ್ತು. ಜಿದ್ದು ಮತ್ತು ಮುಯ್ಯಿಗಳ ಸರಣಿ ಪಾರಂಪರಿಕ ಸ್ಪರ್ಧೆಯಾಗಿ ಬೆಳೆಯಿತು ಮತ್ತು ಮುಂದುವರಿಯಿತು ಕೂಡ. ಎರಡು ವರ್ಷಕ್ಕೊಮ್ಮೆ ನಡೆಯುವ ಕ್ರಿಕೆಟ್ ಪಂದ್ಯಗಳ ಸರಣಿಯಲ್ಲಿ ಎರಡೂ ದೇಶಗಳ ಕ್ರಿಕೆಟ್ ಪ್ರೇಮಿಗಳು ಉತ್ಸುಕತೆ ಆತಂಕದಲ್ಲಿ ಕಾಯುವ ವಾತಾವರಣವನ್ನು ಹುಟ್ಟಿಸಿತು.

ಕ್ರೀಡೆಯೊಂದರ ಕಲೆ, ಕ್ಷಮತೆ, ಕೌಶಲ, ಸೇಡು, ಪ್ರತಿಷ್ಠೆಗಳ ಪರಾಕಾಷ್ಠೆಗಳಿಗೆ ಹೆಸರಾಗಿದ್ದ ಆಶಸ್‌ನ ದೀರ್ಘ ಇತಿಹಾಸದ ಹೊಚ್ಚ ಹೊಸ ಪುಟವಾದ ಮೊನ್ನೆಮೊನ್ನಿನ ಸೋಲು ಕ್ರಿಕೆಟಿನ ಹುಟ್ಟೂರಿನಲ್ಲಿ ಕ್ರಿಕೆಟಿನ ಪ್ರಸ್ತುತ ಪರಿಸ್ಥಿತಿಯ ಬಗೆಗಿನ ಚರ್ಚೆಯನ್ನು ಮತ್ತೆ ಹುಟ್ಟುಹಾಕಿದೆ. ಅನಿರೀಕ್ಷಿತ ತಿರುವುಗಳು, ಊಹಿಸಲಾಗದ ಫಲಿತಾಂಶಗಳ ಕಾರಣಕ್ಕೆ ಕೆಲವೊಮ್ಮೆ ಮನುಷ್ಯ ಜೀವನಕ್ಕೆ ಹೋಲಿಸಲ್ಪಡುವ ಕ್ರಿಕೆಟ್ ಪಂದ್ಯದಲ್ಲಿ ಸೋಲು- ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಬೇಕಾದ ಪಾಠ, ಭಗ್ನ ಹೃದಯಿಯ ಯಾತನೆಗೆ ಹೋಲಿಸಬಹುದಾದ ಹತಾಶೆಯ ಅನುಭವ ಸಾಮಾನ್ಯ. ಆದರೂ ಮತ್ತೆ ಆ ಕಾರಣಗಳಿಗಾಗಿಯೇ ಜನಾಕರ್ಷಣೆ ಪಡೆದಿರುತ್ತಿದ್ದ ಇಂಗ್ಲಿಷ್ ಕ್ರಿಕೆಟ್ ಇತ್ತೀಚಿನ ವರ್ಷಗಳಲ್ಲಿ ಹೊಸ ತಲೆಮಾರಿನ ಪ್ರೇಕ್ಷಕರನ್ನು ಸೆಳೆಯುವಲ್ಲಿ ವಿಫಲ ಆಗುತ್ತಿದೆ. ಇಂಗ್ಲೆಂಡಿನ ಜನರ ನಡುವೆ ಸಾಮಾನ್ಯವಾಗಿ ನಡೆಯುವ ನಿತ್ಯದ ಹರಟೆಯೊಳಗೆ ಸ್ಥಾನ ಪಡೆಯುವಲ್ಲಿ ಸೋಲುತ್ತಿದೆ. ಯುವಜನತೆಯ ಆಸಕ್ತಿ ಮತ್ತು ನೆನಪುಗಳಿಂದ ದೂರ ಆಗುತ್ತಿದೆ. ಬೇಸಿಗೆಯಲ್ಲಿ ಕ್ರಿಕೆಟ್ ಪಂದ್ಯಗಳು ಹಿಂದಿಗಿಂತ ಹೆಚ್ಚೇ ನಡೆದರೂ ಕ್ರೀಡಾಂಗಣದ ಆಸನದಲ್ಲಿ ದಕ್ಷಿಣ ಏಷ್ಯಾ ಮೂಲದ ಪ್ರೇಕ್ಷಕರೇ ಹೆಚ್ಚಾಗಿ ಕಾಣಿಸುವುದು ಸಾಮಾನ್ಯ ಆಗಿದೆ.

70-80ರ ದಶಕದಲ್ಲಿ ಜೆಫ್ ಬಾಯ್ಕಾಟ್ ಅಥವಾ ಇಯಾನ್ ಬೋಥಮ್‌ರು ಇಂಗ್ಲೆಂಡಿನ ಮನೆಮಾತಾಗಿದ್ದವರು. ಆ ಕಾಲದ ಅತ್ಯಂತ ಪ್ರಸಿದ್ಧ ಫುಟ್ಬಾಲ್ ತಾರೆಯರಷ್ಟೇ ಜನಪ್ರಿಯತೆ ಪಡೆದಿದ್ದವರು. ಆದರೆ, ಪ್ರಸ್ತುತ ಇಂಗ್ಲೆಂಡ್ ತಂಡದ ನಾಯಕ ಅಥವಾ ಮುಖ್ಯ ಆಟಗಾರರ ಹೆಸರು ಇಂಗ್ಲೆಂಡಿನ ಬಹುತೇಕ ಜನರಿಗೆ ಗೊತ್ತಿರಲಿಕ್ಕಿಲ್ಲ. ಜೋ ರೂಟ್ ಎಲ್ಲಾದರೂ ಬೀದಿಯಲ್ಲಿಯೋ ಅಂಗಡಿಯಲ್ಲಿಯೋ ಎದುರಾದರೆ ಹಸ್ತಾಕ್ಷರಕ್ಕೆ ದುಂಬಾಲು ಬೀಳುವುದು ಬಿಡಿ, ಗುರುತು ಹಿಡಿಯುವವರೇ ವಿರಳವಾಗಿರಬಹುದು ಎನಿಸುತ್ತದೆ. ಇಂಗ್ಲೆಂಡಿನಲ್ಲಿ ಹುಟ್ಟಿ ಬಲಿತ, ಇಂಗ್ಲಿಷರು ತಕ್ಕಡಿ ಹಿಡಿದು ಹೋದಲ್ಲೆಲ್ಲ ಬಿತ್ತಿ ಬೆಳೆದ ಕ್ರೀಡೆಯೊಂದು ಯಾಕೆ ಅಸಡ್ಡೆಗೆ ಗುರಿ ಆಗುತ್ತಿರಬಹುದು ಎನ್ನುವುದರ ವಿಶ್ಲೇಷಣೆಯೂ ಆಶಸ್‌ನ ಮೊದಲ ಪಂದ್ಯದ ಅಪಮಾನಕರ ಸೋಲಿನಿಂದ, ಸ್ಟುಡಿಯೋದಲ್ಲಿ ಕುಳಿತು ಕ್ರಿಕೆಟನ್ನು ಚರ್ಚಿಸುವ ಬಿಳಿಕೂದಲ ಗತಕಾಲದ ಇಂಗ್ಲಿಷ್ ಕ್ರೀಡಾ ಪಂಡಿತರ ಕಾಮೆಂಟರಿಯೊಳಗೆ ಸೇರಿಕೊಂಡಿದೆ. ದಿನಪತ್ರಿಕೆಯ ಮೂಲೆಯಲ್ಲಿ ಅಭಿಮತವಾಗಿ ಜಾಗ ಪಡೆದಿದೆ. ಆಂಗ್ಲರು ನಿಜವಾದ ಕ್ರಿಕೆಟ್ ಎಂದು ಕರೆಯುವ, ಐದು ದಿನಗಳ ಟೆಸ್ಟ್ ಪಂದ್ಯಗಳು ಒಂದು ಕಾಲದಲ್ಲಿ ಉಚಿತವಾಗಿ ದೂರದರ್ಶನದಲ್ಲಿ ಪ್ರಸಾರಗೊಳ್ಳುತ್ತಿದ್ದವು. ಆಶಸ್‌ನ ವೀರೋಚಿತ ಸೋಲು- ಗೆಲುವುಗಳು ಟಿ.ವಿ ಇರುವ ಪ್ರತಿ ಮನೆಯನ್ನೂ ರೇಡಿಯೋ ಆಲಿಸುವ ಜೋಡಿ ಕಿವಿಗಳನ್ನೂ ಸುಲಭವಾಗಿ ತಲುಪುತ್ತಿದ್ದವು. ಈ ಕಾಲದಲ್ಲಿ ಪ್ರಸಾರದ ಹಕ್ಕುಗಳನ್ನು ಚಂದಾ ನೀಡಬೇಕಾದ ಚಾನೆಲ್‌ಗಳಿಗೆ ಮಾರಲಾಗಿದೆ.

ಕ್ರಿಕೆಟ್ ನಿಯಂತ್ರಣ ಮಂಡಳಿಗಳಿಗೆ ಅಲ್ಪಾವಧಿಯಲ್ಲಿ ಹಣ ಹರಿದು ಬರುವುದು ಹೆಚ್ಚಿದೆಯಾದರೂ ದೀರ್ಘಾವಧಿಯಲ್ಲಿ ಕ್ರಿಕೆಟಿನ ಜನಪ್ರಿಯತೆಯನ್ನು ಕುಗ್ಗಿಸಿದೆ. 2019ರ ವಿಶ್ವಕಪ್ ಫೈನಲ್ಸ್ ಬ್ರಿಟನ್ನಿನ ಚಾನೆಲ್ 4ರಲ್ಲಿ ಉಚಿತವಾಗಿ ಪ್ರಸಾರವಾಗಿದ್ದು, ತಮ್ಮ ತಂಡ ಜಯ ಗಳಿಸಿದ್ದನ್ನು ಇಂಗ್ಲೆಂಡಿನ ಉದ್ದಗಲಕ್ಕೆ ಸಂಭ್ರಮಿಸಿದ್ದು, ಇಂಗ್ಲಿಷ್ ಮಣ್ಣಿನ ಕ್ರೀಡೆಗೆ ಸಿಕ್ಕ ಆತ್ಮೀಯತೆಯ ಕೊನೆಯ ಉದಾಹರಣೆ ಇರಬಹುದು.

ಹಾಗೆ ನೋಡಿದರೆ ಕ್ರಿಕೆಟ್ ಆಂಗ್ಲರ ಕೈಬಿಟ್ಟು, ಆಂಗ್ಲರು ಕ್ರಿಕೆಟಿನ ಕೈ ಬಿಟ್ಟು ಹಲವು ದಶಕಗಳೇ ಕಳೆದಿವೆ. ಇದು ಕ್ರಿಕೆಟಿಗೂ ಮತ್ತು ಅದರ ಅಳಿದುಳಿದ ಆಂಗ್ಲ ಅಭಿಮಾನಿಗಳಿಗೂ ಬಹಳ ಬೇಸರದ ವಿಷಯವೇನೂ ಇರಲಿಕ್ಕಿಲ್ಲ. ಇಂಗ್ಲೆಂಡಿನಲ್ಲಿ ಈ

